ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಚಾಮರಾಜನಗರ, ಕೊಪ್ಪಳ, ಮತ್ತು ಯಾದಗಿರಿಯಲ್ಲಿ ಜಿಲ್ಲಾ ಕ್ರೀಡಾಂಗಣಗಳನ್ನು ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಕರ್ನಾಟಕದಲ್ಲಿರುವ 176 ತಾಲ್ಲೂಕುಗಳ ಪೈಕಿ 103 ತಾಲ್ಲೂಕುಗಳ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. 24 ತಾಲ್ಲೂಕುಗಳ ಕ್ರೀಡಾಂಗಣಗಳ ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಇರುವ 49 ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ಇದು ಏನಾಗಿದೆಯೆಂದರೆ, ತಾಲ್ಲೂಕು ಕೇಂದ್ರಗಳಿಗೆ ಮಾತ್ರ ಇಷ್ಟರವರೆಗೆ ನಮ್ಮ ಯೋಜನೆಯಲ್ಲಿದೆ. ಮುಂದಿನ ದಿನಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಗಳಿಗೂ ಕೂಡ ಕ್ರೀಡಾಂಗಣಗಳನ್ನು ಮಾಡುವ ಕೆಲಸಗಳನ್ನು ಮಾಡುತ್ತೇವೆ.

## ವಿಸ್ತರಣೆ, ಪುನಃಶ್ಚೇತನ ಮತ್ತು ಆಧುನೀಕರಣ ಅಡಿಯಲ್ಲಿ ಕಾಮಗಾರಿಗಳು

**232(2447); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)**

ಅ) ಶಹಪುರ ಮತ ಕ್ಷೇತ್ರದಲ್ಲಿ ವಿಸ್ತರಣೆ, ಪುನಃಶ್ಚೇತನ ಮತ್ತು ಆಧುನೀಕರಣ ಅಡಿಯಲ್ಲಿ (ಇ.ಆರ್.ಎಂ.) ತೆಗೆದುಕೊಂಡ ಕಾಮಗಾರಿಗಳು ಯಾವುವು;

ಆ) ಹಾಗಿದ್ದಲ್ಲಿ, ಈ ಕಾಮಗಾರಿಗಳಿಗೆ ಮೀಸಲಿಟ್ಟ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು)?

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

ಅ) ಕೃಷ್ಣಾ ಭಾಗ್ಯ ಜಲ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ನಾರಾಯಣಪುರ ಎಡದಂಡೆ ಮುಖ್ಯ ಕಾಲುವೆ ಹಾಗೂ ಅದರಡಿಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಯಡಿಯಲ್ಲಿ ಶಹಾಪುರ ಮತಕ್ಷೇತ್ರದ ವಾಪ್ತಿಯಲ್ಲಿ ಬರುವ ಮುಖ್ಯವಾಗಿ ಶಹಾಪುರ ಶಾಖಾ ಮುಖ್ಯ ಕಾಲುವೆ (ಭಾಗಶಃ), ಮುದಬಾಳ ಶಾಖಾ ಮುಖ್ಯ ಕಾಲುವೆ (ಭಾಗಶಃ), ಜೇವರ್ಗಿ ಶಾಖಾ ಮುಖ್ಯ ಕಾಲುವೆ (ಭಾಗಶಃ) ಹಾಗೂ

ಇಂಡಿ ಶಾಖಾ ಮುಖ್ಯ ಕಾಲುವೆ (ಭಾಗಶಃ) ಗಳ ವಿಸ್ತರಣೆ, ಪುನಶ್ಚೇತನ ಮತ್ತು ಆಧುನೀಕರಣ (ಇ.ಆರ್.ಎಂ.) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮುಖ್ಯ ಕಾಲುವೆಗಳ ಆಧುನೀಕರಣದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ. ಇವುಗಳಡಿಯಲ್ಲಿನ ವಿತರಣಾ ಕಾಲುವೆ /ಲ್ಯಾಟರಲ್‌ಗಳ ಆಧುನೀಕರಣ ಕಾಮಗಾರಿಗಳ ಅಂದಾಜು ಪತ್ರಿಕೆಗಳೂ ಸಹ ತಯಾರಿಕೆ ಹಂತದಲ್ಲಿದ್ದು, ಶೀಘ್ರದಲ್ಲಿಯೇ ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಕಾರ್ಯಕ್ರಮ ರೂಪಿಸಲಾಗಿದೆ.

ಆ) ಶಹಾಪುರ ಮತಕ್ಷೇತ್ರದಡಿ ಬರುವ ಈ 4 ಭಾಗಶಃ ಶಾಖಾ ಕಾಲುವೆಗಳ ಪೂರ್ಣ ಶಾಖಾ ಮುಖ್ಯ ಕಾಲುವೆ, ಅದರಡಿ ಬರುವ ವಿತರಣಾ ಕಾಲುವೆ/ಲ್ಯಾಟರಲ್ ಗಳ ಇ.ಆರ್.ಎಂ.ಕಾಮಗಾರಿಗಳಿಗೆ ಮೀಸಲಿಟ್ಟ ಮೊತ್ತದ ವಿವರಗಳು ಈ ಕೆಳಗಿನಂತಿವೆ:

| ಕ್ರ ಸಂ. | ಕಾಮಗಾರಿಯ ಹೆಸರು | ಒಟ್ಟಾರೆ ನಿಗದಿತ ಅನುದಾನ(` ಕೋಟಿಗಳಲ್ಲಿ) |
|---|---|---|
| 1 | ಶಹಾಪುರ ಶಾಖಾ ಕಾಲುವೆ | 1198.78 |
| 2 | ಮುದಬಾಳ ಶಾಖಾ ಕಾಲುವೆ | 307.87 |
| 3 | ಜೇವರ್ಗಿ ಶಾಖಾ ಕಾಲುವೆ | 473.61 |
| 4 | ಇಂಡಿ ಶಾಖಾ ಕಾಲುವೆ | 361.10 |
| | ಒಟ್ಟು | **2340.36** |

**ಶ್ರೀ ಗುರು ಪಾಟೀಲ ಶಿರವಾಳ:–** ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ಮುದಬಾಳ ಶಾಖಾ ಕಾಲುವೆಗೆ 307.87 ಕೋಟಿ

ರೂ.ಗಳನ್ನು ಕೊಟ್ಟಿದ್ದಾರೆ. ಆದರೆ survey report ಏನು ಮಾಡಿದ್ದಾರೆ? ಅಲ್ಲಿ ವಾಸ್ತವಾಂಶವನ್ನು ನೋಡಿದರೆ ಇನ್ನೂ ಹೆಚ್ಚಿಗೆ ಹಣ ಬೇಕಾಗುತ್ತದೆ. ಅದಕ್ಕೆ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ, ಮುದಬಾಳ ಶಾಖಾ ಕಾಲುವೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ, ಸಂಪೂರ್ಣವಾಗಿ ನವೀಕರಿಸಿಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ):–** ಮಾನ್ಯ ಅಧ್ಯಕ್ಷರೆ, ಯಾವುದೇ ಕಾಮಗಾರಿಯನ್ನು ಮಾಡಬೇಕಾದಂಥ ಸಂದರ್ಭದಲ್ಲೂ ಕೂಡ ಪೂರ್ಣ ಅಂದಾಜು ಮಾಡಿ, ಅದಕ್ಕೆ ಬೇಕಾಗಿರುವಂಥ ಹಣವನ್ನು ಕೊಡುವಂಥದ್ದು. ಈಗ ಒಟ್ಟಾರೆ ಇಷ್ಟು ಹಣ ನಿಗದಿ ಮಾಡಿರುವಂಥದ್ದು ಇದೆ. ಆದರೆ ಯಾವುದೇ ಸಂದರ್ಭದಲ್ಲೂ ಕಾಮಗಾರಿಯನ್ನು ಅರ್ಧಬರ್ಧ ಮಾಡುವಂಥದ್ದು, ಹಣವಿಲ್ಲದೇ ನಿಲ್ಲಿಸುವಂಥ ಪ್ರಶ್ನೆ ಉದ್ಭವಿಸುವುದಿಲ್ಲ, ಅದು ಬರುವುದೂ ಇಲ್ಲ. ಅದನ್ನು ಸಂಪೂರ್ಣವಾಗಿ ಮುಗಿಸುವಂಥ ಕೆಲಸವನ್ನು ಮಾಡೋಣ.

**ಶ್ರೀ ಗುರು ಪಾಟೀಲ ಶಿರವಾಳ:–** ಮಾನ್ಯ ಅಧ್ಯಕ್ಷರೆ, ಈ ಕಾಲುವೆಯ ಕಾಮಗಾರಿಯನ್ನು ಸಂಪೂರ್ಣವಾಗಿ ತೆಗೆದುಕೊಂಡಿರುವುದಿಲ್ಲ. ಇದನ್ನು ಅರ್ಧದಷ್ಟು ತೆಗೆದುಕೊಂಡು ಅಲ್ಲಲ್ಲಿ.....

**ಅಧ್ಯಕ್ಷರು:–** ಮಾನ್ಯ ಮಂತ್ರಿಯವರು ಉತ್ತರ ಹೇಳಿದ್ದಾರೆ.

**ಶ್ರೀ ಗುರು ಪಾಟೀಲ ಶಿರವಾಳ:–** ಕಾಲುವೆಯನ್ನು ಸಂಪೂರ್ಣವಾಗಿ ತೆಗೆದುಕೊಂಡಿಲ್ಲ, ಬಿಟ್ಟಿರುವುದನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಅಧ್ಯಕ್ಷರೆ, ಪರಿಶೀಲನೆ ಮಾಡುತ್ತೇನೆ.

**ಅಧ್ಯಕ್ಷರು:–** Ok, ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರೆ ಹೇಳಿ.